# ಕೆತ್ತಿ ಬಾರಿಸಿ ಹೊತ್ತೊಯ್ದುಬಿಡುತ್ತೆ

ಕೆತ್ತಿ ಬಾರಿಸಿ ಹೊತ್ತೊಯ್ದುಬಿಡುತ್ತೆ
ಕರುಣಾಮಯಿ!!
ಸಾವಿರ ಸಾವಿರ ಸಾವಿನಲೆಗಳ ಸಾಗರ
ದಂಡೆಗಪ್ಪಳಿಸಿ, ನಡುವೆ ತೇಲಿಸಿ
ಮುಳುಗಿಸಿಬಿಡುತ್ತೆ
ಶಾಂತ, ಹಸನ್ಮುಖಿ, ದುಃಖಾತೀತ, ನಿಶ್ಚಿಂತ

ಇಬ್ಬನಿ ಹನಿ ಹನಿ, ಗರಿಕೆ ಕಣ್ಣಿನ ಮಣಿ
ನೂರು ಕಾಮನಬಿಲ್ಲು, ನಗೆ ಬುಗ್ಗೆ ಉಕ್ಕುಕ್ಕಿ
ಎಳೆಕಣ್ಣುಗಳ ಸೋಜಿಗಕ್ಕೆ ವಿಸ್ಮಯದ ನಕ್ಷತ್ರ
ಬೆಳ್ಳಂಬೆಳಕಿನ ಕುವರ
ಮೆಲ್ಲಗೆ ಮೇಲೇರುತ್ತ ಕೊಂಚ ಕಾವಿನ ಹುನ್ನಾರ.

ಹಾಯಿದೋಣಿಯ ಹರೆಯ ತೊನೆಯುತ್ತ ವನೆಯುತ್ತ
ಜೋಕಾಲಿ ಜೀಕುತ್ತ
ಹಕ್ಕಿಗೊರಲಿನ ಹಸಿರು, ಮುಂಗೋಳಿ ಕೂಗಿದ ಉಸಿರು
ತಂಗಾಳಿ ತೀಡಿ, ಅಂಗಾಂಗ ಹಾಡಿ ಪ್ರೇಮದ ಹಾಡು
ಉಲ್ಲಾಸಮಯ,
ಹಾಗೆಂದುಕೊಂಡ ಈ ಸವಿ ಸಮಯ

ಕಾಣದೂರಿನ ಸರದಾರ, ಅದೃಶ್ಯ ಹರಿಕಾರ
ಬಿರುಗಾಳಿಯಂತೆರಗಿ, ಸುರಗಿ ಸುತ್ತನೆ ಹರಿದು,
ಮುದದ ಚಪ್ಪರ ಮುರಿದು, ಹದದ ಜೋಡಿಯ ನಗೆಯ
ಕೊನೆಗಾಣಿಸಿ ಅಳಿಸಿ, ಕಣ್ಣೀರು ಉಕ್ಕುಕ್ಕಿ
ಸಾಗರ, ಬದುಕ ತೇಲಲೀಯದ ಪಾರಾವಾರ
ಈಗ ಮುಳುಗಿಸಿ ಮುಗಿಸಿದ ಮಾಯದ ಮಹಾಪೂರ

ಕೆತ್ತಿ ಬಾರಿಸಿ ಹೊತ್ತೊಯ್ದುಬಿಡುತ್ತೆ...

